ನೆರವಿನ ಯೋಜನೆಯಲ್ಲಿ ರೂ 10 00 ಲಕ್ಷಗಳನ್ನು ಒದಗಿಸಿ ಕೊಳ್ಳಲಾಗಿತ್ತು ಆದರೆ, ಕಾಲೇಜು ಶಿಕ್ಷಣ ಇಲಾಖೆಯ ಕಟ್ಟಡಗಳಿಗಾಗಿ ದೊರೆಯಬೇಕಾಗಿದ್ದ ರೂ 1871 00 ಲಕ್ಷಗಳಿಗೆ ಬದಲಾಗಿ ರೂ 1328 00 ಲಕ್ಷಗಳಿಗೆ ಅನುಮತಿ ದೊರೆತದ್ದರಿಂದ ವಿಸ್ತರಣೆಗಾಗಿ ಒದಗಿಸಿಕೊಳ್ಳಲು ಉದ್ದೇಶಿಸಲಾಗಿದ್ದ ಅನುದಾನ ಬಿಡುಗಡೆ ಮಾಡಿರುವುದಿಲ್ಲ ಇದನ್ನು ಹುಡ್ಕೋ ನೆರವಿನ ಎರಡನೇ ಹಂತದಲ್ಲಿ ಪರಿಗಣಿಸಲಾಗುವುದು

ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ ರಾಜ್ಯಕ್ಕೆ ಬಿಡುಗಡೆ ಮಾಡಿರುವ ಅನುದಾನ

100 (557) ಶ್ರೀ ಅಂಗಾರ ಎಸ್ (ಸುಳ್ಯ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 3 ವರ್ಷದಲ್ಲಿ ಸರ್ವ ಶಿಕ್ಷಣ ಅಭಿಯಾನ ಕಾರ್ಯ ಕ್ರಮದ ಯೋಜನೆಯಡಿ ಕೆಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಎಷ್ಟು ಅನುದಾನವನ್ನು ಒದಗಿಸಿದೆ (ವರ್ಷವಾರು ಮಹಿತಿ ನೀಡುವುದು)

ಆ) ರಾಜ್ಯ ಸರ್ಕಾರ ಈ ಯೋಜನೆಯಡಿ ಯಾವ ರೀತಿಯ ಕಾರ್ಯಕ್ರಮ ಹಮ್ಮಿಕೊಂಡಿದೆ ಈವರೆಗೂ ವೆಚ್ಚ ಮಾಡಿರುವ ಹಣವೆಷ್ಟು

ಇ) 2001 ರಿಂದ 2003ರವರೆಗೆ ಪ್ರಾಥಮಿಕ ಶಿಕ್ಷಣಕ್ಕಾಗಿ ಕೇಂದ್ರ ಸರ್ಕಾರ ರಾಜ್ಯಕ್ಕೆ ಬಿಡುಗಡೆ ಮಡಿರುವ ಹಣವೆಷ್ಟು ಈ ಹಣದಲ್ಲಿ ರಾಜ್ಯ ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಳೇನು (ವಿವರವನ್ನು ವರ್ಷವಾರು ನೀಡುವುದು)

ಶ್ರೀ ಬಿ ಚಂದ್ರಶೇಕರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ರೂ ಲಕ್ಷಗಳಲ್ಲಿ

ವರ್ಷ	ಒಟ್ಟು ಅನುಮೋದಿತ ಮೊತ್ತ	ಕೇಂದ್ರ ಸರ್ಕಾರದಿಂದ ಬಿಡುಗಡೆ	ರಾಜ್ಯ ಸರ್ಕಾರದಿಂದ ಬಿಡುಗಡೆ
2001–02	6508 62	5023 81	1050 18
2002–03	10465.58	7849 18	1512 22
2003–04	31281 82	8439 78	1259 00

ಆ) ಈ ಯೋಜನೆಯಡಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ವಿವರ

1 ಹೊಸ ಪ್ರಾಥಮಿಕ ಶಾಲೆಗಳ ಪ್ರಾರಂಭ

2 ಇಜಿಎಸ್/ಎಐಇ/ಎಇ ಕೇಂದ್ರಗಳ ಪ್ರಾರಂಭ

3 ಶಿಕ್ಷಕರ ಹುದ್ದೆ ಮಂಜೂರಾತಿ

4 ಶಾಲಾ ಅನುದಾನ–ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಿಗೆ

5 ಶಿಕ್ಷಕರ ಅನುದಾನ–ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರಿಗೆ

6. ಶಾಲಾ ಕೊಠಡಿ ನಿರ್ಮಾಣ ಸೇರಿದಂತೆ ಹಲವಾರು ಸಿವಿಲ್ ಕಾಮಗಾರಿಗಳು
7. ಶಿಕ್ಷಕರ ತರಬೇತಿ
8. ಸಮುದಾಯ ಮುಖಂಡರ ತರಬೇತಿ
9. ಆಯ್ದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ.
10. ಸಂಶೋಧನೆ ಮತ್ತು ಮೌಲ್ಯಮಾಪನ
11. ವಿಶೇಷ ಸಾಮರ್ಥ್ಯಗಳಿರುವ ಮಕ್ಕಳಿಗೆ ಸಮನ್ವಯ ಶಿಕ್ಷಣ
12. ಶಾಲೆಯಿಂದ ಹೊರಗಿರುವ ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರಲು ವಿಶೇಷ ಕಾರ್ಯಕ್ರಮಗಳು

ಈವರೆವಿಗೆ ರೂ. 24,268,99 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಇ) 2001ರಿಂದ 2003ರವರೆಗೆ ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆಯಡಿಯಲ್ಲಿ ಪ್ರಾಥಮಿಕ ಶಿಕ್ಷಣಕ್ಕಾಗಿ ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಬಿಡುಗಡೆ ಮಾಡಿರುವ ಅನುದಾನ ಈ ರೀತಿ ಇದೆ:

(ರೂ.ಲಕ್ಷಗಳಲ್ಲಿ)

ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ:

ಕ್ರ. ಸಂಖ್ಯೆ	ಯೋಜನೆ	2000–01	2001–02	2002–03	2003–04
1	2	3	4	5	6
1.	ಕೊಠಡಿ ನಿರ್ಮಾಣಕ್ಕೆ	371.90	246.05	495.00	247.50
2.	ದುರಸ್ಥಿಗೆ	567.47	374.78	750.35	375.00
3.	ಕುಡಿಯುವ ನೀರು ಮತ್ತು ಶೌಚಾಲಯಕ್ಕೆ	192.18	126.71	255.00	127.50
	ಒಟ್ಟು	1131.55	747.54	1500.351	750.00
ಹನ್ನೊಂದನೇ ಹಣಕಾಸು ಆಯೋಗ:					
1.	ಕೊಠಡಿ ನಿರ್ಮಾಣ	–	382.00	382.00	

ಸದರಿ ಅನುದಾನವನ್ನು ಕೇಂದ್ರ ಸರ್ಕಾರ ಉದ್ದೇಶಿಸಿರುವ ಕಾರ್ಯಕ್ರಮಗಳಿಗಾಗಿಯೇ ಬಳಸಲಾಗುತ್ತಿದೆ. ಈ ಹಣದಲ್ಲಿ ಒಟ್ಟು 753 ಕೊಠಡಿಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ.

ಜಿಲ್ಲಾ ಪಂಚಾಯತ್ ರಸ್ತೆಗಳ ನಿರ್ವಹಣೆಗೆ ಅನುದಾನ ಬಿಡುಗಡೆ

101 (558) : ಶ್ರೀ ಎಸ್. ಅಂಗಾರ ಎಸ್ (ಸುಳ್ಯ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರ 2000–2001 ರಿಂದ 2002–03ರವರೆಗೆ ಜಿಲ್ಲಾ ಪಂಚಾಯತ್ ರಸ್ತೆಗಳ ನಿರ್ವಹಣೆಗೆ ಎಷ್ಟು ಅನುದಾನವನ್ನು ಬಿಡುಗಡೆ ಮಾಡಿದೆ: